ತೊಂದರೆಯಾಗಿರುವುದನ್ನು ಸರ್ಕಾರದ ಗಮನಿಸಿ ಮೊದಲಿನಷ್ಟೇ ವಿತರಣೆಗೆ ಸೂಚನೆ ನೀಡಲು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೋ ಆ ವಿಚಾರವನ್ನು ಸನ್ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಯಂಕಾನಾಯಕ್‌ರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ ಎಚ್. ಯಂಕಾನಾಯಕ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನಗೆ ಸರಿಯಾಗಿ ಉತ್ತರ ಕೊಡಲಿಲ್ಲ. ಅಲ್ಲಿ ಜನರಿಗೆ ಕುಡಿಯುವ ನೀರಿಲ್ಲದೆ ಸಾಯುತ್ತಿದ್ದಾರೆ. ನಾವು ಬೆಂಗಳೂರಿನಲ್ಲಿದ್ದೇವೆ...

ಅಧ್ಯಕ್ಷರು —ತಾವು ಕುಳಿತುಕೊಳ್ಳಿ. ನಿಯಮ ೩೫ರಲ್ಲಿ ವಿತರಣೆ ಕೇಳುವುದಕ್ಕೆ ಬರುವುದಿಲ್ಲ. ತಾವು ವಿಷಯವನ್ನು ಸದನದ ಗಮನಕ್ಕೆ ತಂದಿದ್ದೀರಿ...

ಶ್ರೀ ಬಿ. ಎಚ್. ಯಂಕಾನಾಯಕ್.— ಅಲ್ಲಿ ಜನರಿಗೆ ಕುಡಿಯಲು ನೀರಿಲ್ಲ.

ಅಧ್ಯಕ್ಷರು.— ತಾವು ನಿಯಮಗಳನ್ನು ಸ್ವಲ್ಪ ನೋಡಿ. ನಿಯಮ ಓದಿಕೊಂಡು ಬರಬೇಕು ಇಲ್ಲದಿದ್ದರೆ ಯಾರಾದರೂ ಹೇಳಿದ್ದನ್ನಾದರೂ ಕೇಳಬೇಕಾಗುತ್ತದೆ. ಏರಡೂ ಮಾಡುವುದಿಲ್ಲ.

ಶ್ರೀ ಬಿ. ಎಚ್. ಯಂಕಾನಾಯಕ್.—ಅಲ್ಲಿ ಜನ ನೀರಿಲ್ಲದೆ ಸಾಯುತ್ತಿದ್ದಾರೆ. ತಾವು ಕುಳಿತುಕೊಳ್ಳಿ ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಇಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.— ಅವರು ಬಹಳ ಹಳೆಯ ಎಂ.ಎಲ್.ಎ. ಆಗಿದ್ದಾರೆ. ಕುಡಿಯಲಿಕ್ಕೆ ನೀರು ಇಲ್ಲವೆಂದು ಕೇಳುತ್ತಿದ್ದಾರೆ. ಅವರಿಗೆ ಉತ್ತರವೇ ಇಲ್ಲ ಎಂದರೆ ಹೇಗೆ ?

ಅಧ್ಯಕ್ಷರು.— ಉತ್ತರ ಕೊಡಿ ಎಂದು ಇನ್ಸಿಸ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯಕ್.— ಉತ್ತರ ಕೇಳುವುದಕ್ಕೆ ನಮಗೆ ಹಕ್ಕು ಇಲ್ಲವೇ ?

ಅಧ್ಯಕ್ಷರು.— ತಾವು ಕೂಡ್ರಿ. ನೀವು ಈ ತರಹ ಮಾಡಿದರೆ ಐ ವಿಲ್ ಟೇಕ್ ಆ್ಯಕ್ಷನ್ ಏಗೆನೆಸ್ಟ್ ಯು. ೩೫ರ ನಿಯಮದ ಮೇಲೆ ಇವತ್ತು ೨ಳಿ ವಿಷಯಗಳನ್ನು ಇಟ್ಟಿದ್ದೇವೆ. ನೀವು ಹೀಗೆ ಮಾಡಿದರೆ ನಾವು ಹೇಗೆ ಮುಗಿಸುವುದು ? ಎಲ್ಲರಿಗೂ ಅವಕಾಶ ಮಾಡಿಕೊಡೋಣ ಎಂದು ನಾನು ಇವತ್ತು ೨ಳಿ ವಿಷಯಗಳನ್ನು ಇಟ್ಟಿದ್ದೇವೆ. ವಿಷಯವನ್ನು ಸದನದ ಗಮನಕ್ಕೆ ತಂದಿದ್ದೀರಿ. ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಉತ್ತರವನ್ನು ನಂತರ ಕಳುಹಿಸಿಕೊಡುತ್ತಾರೆ. ಈಗ ತಾವು ಕೂಡ್ರಿ.

ಶ್ರೀ ಆರ್. ವೆಂಕಟರಾಮಯ್ಯ.— ಅವರಿಂದ ಮಿನಿಸ್ಟರುಗಳೇ ಇರಬೇಕೆಂದು ಕೇಳುತ್ತಿಲ್ಲ. ಮಿನಿಸ್ಟರ್‌ಗಳವರು ಬರುವುದಕ್ಕೆ ಆಗದೇ ಇದ್ದರೆ ಸಂಬಂಧಪಟ್ಟ ಸ್ಟೇಟ್‌ಮೆಂಟ್‌ನ್ನು ಬೇರೆ ಯಾರಾದರೂ ಮಂತ್ರಿಗಳವರಿಗೆ ಕೊಡಬೇಕು.

ಅಧ್ಯಕ್ಷರು — ಮಾನ್ಯ ವೆಂಕಟರಾಮಯ್ಯನವರೇ, ತಾವು ಕೂಡ್ರಿ. ೩೫ರ ನಿಯಮದ ಮೇಲೆ ಉತ್ತರವನ್ನು ಕೊಡಲೇಬೇಕೆಂದು ಇನ್ಸಿಸ್ಟ್ ಮಾಡುವ ಹಾಗಿಲ್ಲ. ನೀವು ಈ ತರಹ ಮಾಡಿದರೆ ಇನ್ನು ಮುಂದೆ ನಾಲ್ಕೈದು ವಿಷಯಗಳನ್ನು ಮಾತ್ರ ಬ್ಯಾಲೆಟ್ ಮಾಡಿ ಇಡಬೇಕಾಗುತ್ತದೆ.

೧೦) ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು ಸರಿಯಾಗಿ ನಡೆಯಲು ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವುದು

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಸರಕಾರಿ ಹೈಸ್ಕೂಲುಗಳಿಗೆ ಮತ್ತು ಸರಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಸಮಿತಿಗಳನ್ನು ರಚಿಸಲು ಕಳೆದ ವರ್ಷವೇ ಸರಕಾರದಿಂದ ಸೂಚನೆ ನೀಡಲಾಗಿತ್ತು. ಸದಸ್ಯರ

ನೀಡಿಕೆಯ ಸಲುವಾಗಿ ನೀಡಲಾದ ಮಾರ್ಗದ ಸೂಚನೆಗಳಂತೆ ಶಾಸಕರ ಸಲಹೆ ಪಡೆದು ಅಭಿವೃದ್ಧಿ ಸಮಿತಿಗಳು ರಚಿತವಾಗಿದ್ದರೂ, ಕಾರ್ಯರೂಪಕ್ಕೆ ಬಂದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಮಿತಿಗಳಿಗೆ ಇನ್ನೂ ವಿದ್ಯಾ ಇಲಾಖಾ ಉಪ ನಿರ್ದೇಶಕರ ಒಪ್ಪಿಗೆ ದೊರೆತಿಲ್ಲವೆಂದು ಕೆಲವು ಶಿಕ್ಷಣ ಸಂಸ್ಥೆಗಳಿಂದ ತಿಳಿದು ಬಂದಿದೆ. ತಮ್ಮ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲು ಶಾಸಕರಾರು ಕೇಳಿಕೊಂಡಿಲ್ಲ. ಆದರೆದ ಸರಕಾರವು ಶಾಸಕರ ಮಾರ್ಗದರ್ಶನದಲ್ಲಿ ಸಮಿತಿಗಳು ಕಾರ್ಯನಿರ್ವಹಿಸಬೇಕೆಂದು ತೀರ್ಮಾನಿಸಿ ಆದೇಶ. ನೀಡಿದ್ದರೂ, ಸಾಂಪ್ರದಾಯವಾಗಿ ನೀಡಬೇಕಾದ ಮಂಜೂರಾತಿಗೆ ಸರಕಾರದ ವಿದ್ಯಾ ಇಲಾಖಾಧಿಕಾರಿಗಳೇ ಮೊನಮೇಷ ಮಾಡುತ್ತಿರುವುದು ನಿಧಾನದ್ರೋಹದ ಕಾರ್ಯವೈಖರಿಗೆ ಸ್ಪಷ್ಟ ಉದಾಹರಣೆಯಾಗಿದೆ ಮತ್ತು ಶಾಸಕ ಸಮುದಾಯದ ಮೇಲೆ ಮಾಡುತ್ತಿರುವ ಅಪ್ರತ್ಯಕ್ಷ ಅಪಮಾನವೂ ಆಗಿದೆ ಸರಕಾರಕ್ಕೆ ತನ್ನ ಅಂಗೀಕೃತ ನೀತಿಯಲ್ಲಿ ನಂಬಿಕೆ ಇದ್ದರೆ, ಕೂಡಲೇ ಮಂಜೂರಾತಿ ನೀಡಿ, ಸಮಿತಿಗಳು ಕಾರ್ಯ ಪ್ರವೃತ್ತವಾಗುವಂತೆ ನೋಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

೧೧. ಚಿಂಚೋಳಿ ತಾಲ್ಲೂಕಿನ ರಟಕಲ ಗ್ರಾಮದಲ್ಲಿ ಹೊಸಕಟ್ಟಡ ಕಟ್ಟಿದ್ದರೂ ಹಳೆ ಕಟ್ಟಡದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ನಡೆಸುತ್ತಿರುವ ಬಗ್ಗೆ

ಶ್ರೀ ಎಂ. ವೀರಯ್ಯಸ್ವಾಮಿ.— ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕಿನ ರಟಕಲ ಗ್ರಾಮದಲ್ಲಿ ಸರಕಾರಿ ಪ್ರೌಢಶಾಲೆ ಕಟ್ಟಿಡ ಕೆಲಸ ಕಳೆದ ೩ ವರ್ಷಗಳ ಹಿಂದೆಯೇ ಪೂರ್ತಿಯಾಗಿ ಮುಗಿದಿದ್ದು, ಕೇವಲ ಕಂಟ್ರಾಕ್ಟುದಾರರು ಹಾಗೂ ಕಾಮಗಾರಿ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಯಿಂದಾಗಿ ಸರಕಾರದ ವಶಕ್ಕೆ ತೆಗೆದುಕೊಳ್ಳದೆ ಸ್ಥಳಾವಕಾಶವಿಲ್ಲದ ಹಳೆಯ ಕಟ್ಟಡದಲ್ಲಿ ಶಾಲೆ ನಡೆಸುತ್ತಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಅನೇಕ ಸಲ ಕೇಳಲಾಗಿ ಯಾವುದೇ ತೃಪ್ತಿಕರ ಉತ್ತರ ಬಂದಿಲ್ಲ. ಈ ಬಗ್ಗೆ ಸರಕಾರ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ಶಾಲೆ ಕಟ್ಟಡ ಸುಸಜ್ಜಿತ ರೀತಿಯಲ್ಲಿ ಶಿಕ್ಷಣ ಇಲಾಖೆಗೆ ವರ್ಗಾಯಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ.

೧೨. ಉಡುಪಿ ತಾಲ್ಲೂಕಿಗೆ ಸ್ವರ್ಣ ನೀರು ಸರಬರಾಜು ಎರಡನೇ ಹಂತಕ್ಕೆ ಮಂಜೂರಾತಿ ನೀಡುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಪ್ರತಿವರ್ಷ ಮಾರ್ಚ್ ಮಧ್ಯ ಭಾಗದಿಂದ ಮುಂಗಾರು ಪ್ರಾರಂಭವಾಗುವವರೆಗೆ ಉಡುಪಿಯ ಪುರಸಭೆಯ ಸರಹದ್ದಿನಲ್ಲಿ ಹಾಗೂ ಇತರ ಕೆಲವು ಗ್ರಾಮಗಳ ಜನರು ನೀರಿನ ಕೊರತೆಯನ್ನೆದುರಿಸುವ ದೃಷ್ಟಿಯಿಂದ ಸ್ವರ್ಣ ನೀರು ಸರಬರಾಜು ಯೋಜನೆಯ ಎರಡನೇ ಹಂತಕ್ಕೆ ಮಂಜೂರಾತಿ ನೀಡಬೇಕೆಂದು ಸರಕಾರವನ್ನು ಈಗಾಗಲೇ ಒತ್ತಾಯಿಸಲಾಗಿದ್ದು, ಪುರಸಭೆಯವರಿಗೆ ಇದಕ್ಕೆ ವೆಚ್ಚವಾಗುವ ಹಣವನ್ನು ಹಿಂದಿರುಗಿಸುವ ಸಾಮರ್ಥ್ಯವಿಲ್ಲ ಎಂಬ ಕಾರಣವೊಡ್ಡಿ, ಸರಕಾರದವರು ಈ ಯೋಜನೆಗೆ ಮಂಜೂರಾತಿ ನೀಡಿರುವುದಿಲ್ಲ. ಸುಮಾರು ೨೦ ಹೆಚ್ಚಿನ ಗ್ರಾಮಗಳಿಗೆ ಈ ಯೋಜನೆಯಿಂದ ಅನುಕೂಲವಾಗಲಿದ್ದು ವೆಚ್ಚದ ಶೇ.೫೦ರಷ್ಟನ್ನು ಕೇಂದ್ರಸರಕಾರ ಭರಿಸಲಿರುವುದರಿಂದ ಉಡುಪಿ ಪುರಸಭೆ ಎಲ್ಲೆಯಲ್ಲಿ ಬರುವ ಜನರಿಗೆ ಮಾತ್ರವಲ್ಲದೆ ಇತರೇ ಅನೇಕ ಗ್ರಾಮಂಗಳ ಜನರಿಗೂ ಈ ಯೋಜನೆಯನ್ನು ಪುನರ್‌ಪರಿಶೀಲಿಸ ಬೇಕೆಂದೂ, ಈ ವರ್ಷ ಹಿಂದಿಗಿಂತ ನೀರಿನ ಬವಣೆ ಹೆಚ್ಚಿರುವುದರಿಂದಲೂ, ಮೇಲ್ಕಂಡ ಯೋಜನೆಯನ್ನು ಪುನರ್ ಪರಿಶೀಲಿಸಬೇಕೆಂದೂ, ಹಾಗೂ ಕೂಡಲೇ ಅನುಮತಿ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.